**SC No. 110/2017**
**PW-43**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 110/2017

| | | |
|---|---|---|
| ಸಾಕ್ಷಿದಾರರ ಹೆಸರು | ರುದ್ರೇಗೌಡ | ಪ್ರಮಾಣ ವಚನ ಮಾಡಿದ ದಿನಾಂಕ: 09.04.2026 |
| ತಂದೆಯ/ಗಂಡನ ಹೆಸರು | ಲೇಟ್ ಈರೇಗೌಡ | |
| ವಯಸ್ಸು | 47 ವರ್ಷ | |
| ವೃತ್ತಿ | ಮುಖ್ಯ ಪೇದೆ, ಮಂಡಿ ಪೊಲೀಸ್ ಠಾಣೆ | ಪ್ರಾ.ಸಾಃ 43 |
| ವಾಸ ಸ್ಥಳ | ಇಲವಾಲ ಮೈಸೂರು | ಚಾ.ಸಾಃ 65 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ವಿವಿಪುರಂ ಪೊಲೀಸ್ ಠಾಣೆಯಲ್ಲಿ *2010* ರಿಂದ *2019* ರವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ *14.01.2017* ರಂದು ಹಗಲು ಕರ್ತವ್ಯದಲ್ಲಿ ಇದ್ದು ನನಗೆ ತನಿಖಾಧಿಕಾರಿಯವರು ಠಾಣಾ ಮೊ.ಸಂಖ್ಯೆ *142/2016* ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ವಸ್ತುಗಳನ್ನು ***FSL,*** ಮೈಸೂರಿಗೆ ತೆಗೆದುಕೊಂಡು ಹೋಗಲು ಆದೇಶ ಮಾಡಿದ್ದರು ಅದರಂತೆ ನಾನು ದಿನಾಂಕ *14.01.2017* ರಂದು ಮಾನ್ಯ ಎಸಿಪಿ ಎನ್.ಆರ್. ರವರ ಕಛೇರಿಗೆ ಹೋಗಿ ***FSL,*** ಮೈಸೂರಿಗೆ ಹೋಗಲು ಅನುಮತಿ ಪಡೆದುಕೊಂಡು ಬಂದಿದ್ದೆನು.

ದಿನಾಂಕ *16.01.2017* ರಂದು ಮೈಸೂರಿನ ನಿರ್ದೇಶಕರು, ಪ್ರದೇಶಿಕ ವಿಧಿವಿಜ್ಞಾನ

ಪ್ರಯೋಗಾಲಯ ಅಲ್ಲಿಗೆ ವಸ್ತುಗಳನ್ನು ಮತ್ತು ಅನುಮತಿ ಪತ್ರಗಳನ್ನು ತೆಗೆದುಕೊಂಡು ಹೋಗಿ ಕೊಟ್ಟು ಸ್ವೀಕೃತಿ ಪಡೆದು ನಂತರ ಠಾಣೆಯಲ್ಲಿ ಬಂದು ವರದಿ ಮಾಡಿಕೊಂಡಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*137* ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ 1 ರಿಂದ 6 ರ ಪರ ವಕೀಲರಿಂದ :</u>**

ನನ್ನನ್ನು ಕೆಲವೊಂದು ವಾರ ಹಗಲು ಕರ್ತವ್ಯಕ್ಕೆ ಕೆಲವೊಂದು ವಾರ ರಾತ್ರಿ ಕರ್ತವ್ಯಕ್ಕೆ ಹಾಕುತ್ತಾರೆ. ದಿನಾಂಕ 14.01.2017 ರಂದು ನನ್ನನ್ನು ಹಗಲು ಕರ್ತವ್ಯಕ್ಕೆ ನೇಮಕ ಮಾಡಿದ್ದರು. ತನಿಖಾಧಿಕಾರಿಯವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ತೆಗೆದುಕೊಂಡು ಹೋಗಿದ್ದೆ ಎಂದು ಹೇಳುವ ವಸ್ತುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಂತಹ ವಸ್ತುಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ 7 ರಿಂದ 12 ಪರ ವಕೀಲರಿಂದ :</u>**

7 ರಿಂದ 12 ನೇ ಆರೋಪಿ ಪರ ವಕೀಲರು ಆರೋಪಿ 1 ರಿಂದ 6 ರವರು ಮಾಡಿದಂತಹ ಪಾಟೀ ಸವಾಲಿನಂತೆಯೇ ತನ್ನ ಪಾಟೀ ಸವಾಲು ಇರುತ್ತದೆ ಎಂದು ಹೇಳಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**